ಮದುವೆಯಾಗಿ ಹುಟ್ಟಿದ ಶಿಶು ಧರ್ಮವೇ ನನ್ ಧರ್ಮ ಅಂದಿದ್ದೆ. ಎರಡೂ ಮದ್ವೆ ಆದವೇ, ಮಗು ಹುಟ್ಟಿತೇ ಅನ್ನೋ ಪ್ರಶ್ನೆನೂ ಬರುತ್ತೆ. ಆದರೆ ಸ್ಪಿರಿಟ್ ತಗೊಂಡ್ರೆ ಎರಡರಲ್ಲೂ ಚಯವಿದೆ. ಇಲ್ಲಿ ಜಾನಪದ ಅಂಶವಿದೆ. ಸಾಮಾನ್ಯನೂ ಲಿಂಗ ಹಿಡಿಯಬಹುದು. ಬೌದ್ಧರಲ್ಲಿ ಆಲೋಚನೆ, ಧ್ಯಾನ ಇದೆ. ಜಾನಪದ ಆಲೋಚನೆ ಒಟ್ಟುಗೂಡಬೇಕು'. ಹೀಗೆ ನಮ್ಮ ಭವಿಷ್ಯ, ಧರ್ಮದ ರೂಪರೇಷೆಗಳ ನೀಲನಕ್ಷೆಯ ಬಗ್ಗೆ ಹೇಳುವುದು ನೋಡಿ ಬೆರಗಾಗುತ್ತೇನೆ.

ಅವರು ಯೂಟ್ಯೂಬ್, ಫೇಸ್‌ಬುಕ್‌ನಲ್ಲಿ ಒಳ್ಳೆಯ ಸಂಗೀತವನ್ನ, ಕೆಲವು ವಿಚಾರಗಳನ್ನು, ಧಾರಾವಾಹಿ ಸಮೇತ ನೋಡ್ತಾರೆ. ಅದರಲ್ಲಿ ಓಶೋ ಅವರ ಒಂದು ವಿಡಿಯೋ ಅದೆಷ್ಟು ಸಲ ನೋಡಿದ್ದಾರೆ ಹಾಗೂ ಅದೆಷ್ಟು ಜನಕ್ಕೆ ಹಂಚಿದ್ದಾರೆ ಅಂದ್ರೆ ಅಷ್ಟಿಷ್ಟಲ್ಲ. ಒಂದ್ಸಲ ಆ ವಿಡಿಯೋ ಲೈನ್ ಟು ಲೈನ್ ಸುಮಿತ್ರಾ ಮೇಡಂ ಜೊತೆ ವಿವರಿಸ್ತಾ ಹೇಳಿದ್ರು. ಆ ವಿಡಿಯೋ ಟೈಟಲ್ ಹೀಗಿದೆ: OSHO learn to Uncode the language of Silence. ಆ ಸಾಲುಗಳ ಅದ್ಭುತವನ್ನು ವಿವರಿಸಿ ಸಾಹಿತ್ಯವೂ ಹೀಗೆ ತಲೆಯೊಳಗೆ ಓಡೋದನ್ನೇ ತೆಗೆಯುತ್ತೇವೆ. ಆದರೆ ಒಬ್ಬ ಕ್ರಿಯೇಟಿವ್ ಆದವನು ಸೈಲೆನ್ಸ್ ಒಳಗಿಂದ ತೆಗೆಯಲು ಪ್ರಯತ್ನ ಪಡ್ತಾನೆ. ಇದನ್ನೇ ಕೋಡ್ ಆಫ್ ಲ್ಯಾಂಗ್ವೇಜ್ ಅಂತೇವೆ, ಗೊತ್ತಾಯ್ತಾ... ಮನೋಚೇಷ್ಟೆ ಬಿಡಬೇಕು ನಾನು–ನೀವು.' ಈ ಮಾತಿಗೆ, 'ನೋಡಿದ್ರ ಸಾಹಿತ್ಯಿಕವಾಗಿ ನಿಮಗೋಸ್ಕರ ಹೇಳಿದ್ರು' ಅಂತ ಸುಮಿತ್ರ ಮೇಡಂ ಹೇಳಿದ್ರೆ, 'ಸುಮಿತ್ರು, ಈಗ್ಲೂ ಅವ್ರು ಅರ್ಥ ಆಗಿದೆ ಅಂತ ಸುಮ್ನಿದ್ದಾರೆ ಹ್ಹ ಹ್ಹ ಹಾ ಹಾ!' – ಹೀಗೆ ಛೇಡಿಸೋದು ನಂಗೇನು ಹೊಸದಾಗಿ ಉಳಿದಿಲ್ಲ.

ಜಾನಪದ ಮಟ್ಟು, ತಾಳ, ರಾಗಬದ್ಧವಾದ ಹಾಡುಗಾರಿಕೆ ಅಂದ್ರೆ ಅವರಿಗೆ ತುಂಬಾ ಇಷ್ಟ. ಈಗಲೂ ಮನೆ ಮುಂದೆ ಬರೋ ಗುಡ್ಡರು, ನೀಲಗಾರರು ಹಾಡು ಹೇಳಿಯೇ ಮುಂದಕ್ಕೆ ಹೋಗಬೇಕು. ಒಳಗೆ ನಮ್ ಮಾಯ್ಕಾರ ಕೂತ್ಕಂಡು, ತಲೆ ಆಡುಸ್ತಾ ಮನಸ್ಸಲ್ಲೇ ಕುಣೀತಾರೆ. ಒಮ್ಮೆ ಅರ್ಜುನ ಜೋಗಿ ಹಾಡ್ ಕೇಳ್ತಾ ನನ್ನಾ ಹತ್ರಕ್ಕೆ ಕರದ್ರು. "ಮುಸ್ಲಿಂರ ಸತ್ಕಾರಕ್ಕೆ ಮನಸೋತು, ಎಷ್ಟೇ ಬಡವರಾದ್ರು ಅನ್ನ ತುಪ್ಪ ಉಣ್ಣಿ ಅಂತ ಆಶೀರ್ವಾದ ಮಾಡ್ತಾನಂತೆ ಅರ್ಜುನ" ಅಂದ್ರು.



ನಾನಿದ್ದವ್ನು, "ಸರ್ ಮಹಾಭಾರತದ ಕಾಲದಲ್ಲಿ ಮುಸ್ಲಿಮರು ಇದ್ರಾ ಸರ್" ಅಂದೆ. "ಅರ್ಜುನ ಜೋಗಿ ಹಾಡು ಯಾವ್ದೋ ಕಾಲದಲ್ಲಿ ಕೆತ್ತಿರೋದು. ಹಾಗೆ ನೋಡೋಕ್ ಹೋದ್ರೆ, ಭಗವದ್ಗೀತೆ ಮಹಾಭಾರತದಲ್ಲಿ ಬರೋ ಒಂದು ಸಾಲು ಯುದ್ಧ ಮಾಡೋಕೆ ಬೇಜಾರಾಗಿ ನಿಂತಿದ್ದಾಗ ಅವನನ್ನ ಕನ್ವಿನ್ಸ್ ಮಾಡ್ದ ಅನ್ನೋ ಭಾಗಾನ ಶಂಕರಾಚಾರ್ಯ ಚಾತುರ್ವರ್ಣ ಸಿಸ್ಟಮ್ ಹಾಕಿ, ಅದುವರೆಗೂ ಇತ್ತಲ್ಲ ಬೇರೆ ಬೇರೆ ಸಿಸ್ಟಮ್ – ಬುದ್ಧ ಜೈನ ಶಾಕ್ಯ ಥಿಂಕಿಂಗ್ ಪ್ಯಾಟರ್ನ್ ಎಲ್ಲ ಬಳಸ್ಕೊಂಡು ಭಗವದ್ಗೀತೆ ಬರದು ಮಹಾಭಾರತಕ್ಕೆ ಸೇರಿಸ್ಬಿಟ್ರು. ಇದು ಜನಪದ ಅರ್ಜುನ ಜೋಗಿ ಹಾಡು, ಇವತ್ ಯಾರ್ ಯಾರ್ ಇರ್ತಾರೋ ಎಲ್ರೂ ಇರ್ತಾರೆ." ಒಮ್ಮೆಗೆ ಚಳಿ ಜ್ವರ ಬಂದವನಂಗೆ 'ಸರಿ ಸರ್' ಅಂತೇಳಿ, ಎಷ್ಟೋ ಮುಚ್ಚಿಟ್ಟ ಕಟು ಸತ್ಯಗಳ ಬಿಸಿಗೆ ಬೆವತೋದೆ.

ಸದ್ಯಕ್ಕೆ ರಾಮುಕಾಕಾ ಬರೆದ ಮಹಾಭಾರತದೊಳಗೆ ದೇಮ ಅವರು ಸ್ವಲ್ಪ ಕರ್ತವ್ಯನಿರತರು. ಅವರೇ ಹೇಳುವಂತೆ, 'ಕುಸುಮಬಾಲೆ'ಗೆ ಹಾಕಿದ ಶ್ರಮದಷ್ಟೇ ಈ ಕೃತಿಗೂ ಸಮಯ ಕೊಟ್ಟಿದ್ದಾರೆ. ಬೆಳಿಗ್ಗೆ ಎಂದರೆ ಬೆಳಿಗ್ಗೆ ತಡರಾತ್ರಿ ಎಂದರೆ ತಡರಾತ್ರಿಯವರೆಗೂ, ಯಾವುದೋ ಪರೀಕ್ಷೆಗೆ ಸಿದ್ಧವಾಗುವ ವಿದ್ಯಾರ್ಥಿಯ ಹಾಗೆ ಶ್ರಮ ಪಡುತ್ತಿದ್ದಾರೆ.

ದೇಮ ಅವರು ನನ್ನ ಭಾವಕ್ಕೆ ಹುಡುಕಿದಷ್ಟು ಸಂಪೂರ್ಣ ಹಿಡಿದಿಡಲು ಸಿಗುವುದಿಲ್ಲ. ಆದರೆ ಸಿಕ್ಕಷ್ಟು ಪ್ರಮಾಣದಲ್ಲಿ ಒಟ್ಟಾರೆಯಾಗಿರುತ್ತಾರೆ – 'ನಿಮ್ಮನ್ನು ಸಂತ ಎನ್ನುತ್ತಾರಲ್ಲ' ಎನ್ನುವ ಪ್ರಶ್ನೆಗೆ 'ದಿನಕ್ಕೆ ಅರ್ಧ ಗಂಟೆ' ಎನ್ನುವಂತೆ. ●